**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**
**ಕನಕಪುರ**

## ಸಿ.ಸಿ.ನಂ.1201/2020

## ಃ ದೋಷಾರೋಪಣೆ ಃ

**ಶ್ರೀ ಸುರೇಶ ಅಣ್ಣಪ್ಪ ಸವದಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ಕನಕಪುರ ಆದ ನಾನು**

ಲಿಂಗರಾಜು ಬಿನ್ ಚನ್ನಯ್ಯ
ವಯಸ್ಸು **೪೬** ವರ್ಷಗಳು
ವಾಸಃ ಯಡುವನಹಳ್ಳಿ ಗ್ರಾಮ
ಮರಳವಾಡಿ ಹೋಬಳಿ
ಕನಕಪುರ ತಾಲ್ಲೂಕು

**ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪವೇನೆಂದರೆ ಃ-**

ದಿನಾಂಕ.14.09.2020 ರಂದು ಸಂಜೆ ಸುಮಾರು 4:30 ಗಂಟೆಯಿಂದ ಸಂಜೆ 5ಃ15 ಗಂಟೆ ಸಮಯದಲ್ಲಿ ಹಾರೋಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ಯಡವನಹಳ್ಳಿ ಗ್ರಾಮದಲ್ಲಿ ಆರೋಪಿಯಾದ ನೀವು ನಿಮ್ಮ ಅಂಗಡಿಯಲ್ಲಿ ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಯಾವುದೇ ಪರವಾನಗಿ ಹೊಂದದೆ ಕರ್ನಾಟಕ ಅಬಕಾರಿ ಕಾಯ್ದೆಯ ಉಪಬಂಧಗಳಿಗೆ ವಿರುದ್ದವಾಗಿ ೧೮೦ ಎಂ.ಎಲ್ ನ ೧೦ ಬ್ಯಾಗ್ ಪೇಪರ್ ವಿಸ್ಕಿ ತುಂಬಿದ ಪೌಚ್ಗಳು, ೯೦ ಎಂ.ಎಲ್ ನ ೪೧ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ ಬಾಟಲುಗಳನ್ನು ಹೊಂದುವ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ–೧೯೬೫ರ ಕಲಂ ೩೨ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೆಯದಾಗಿ, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಯಾವುದೇ ಕಾನೂನು ಅಧಿಕಾರವಿರದೆ (ಪರವಾನಿಗೆ), ಮದ್ಯದ ಬಾಟಲ್‌ಗಳನ್ನು ದಾಸ್ತಾನು ಇಟ್ಟುಕೊಳ್ಳುವುದು ಕಾನೂನು ಬಾಹಿರ ಎಂದು ತಿಳಿದೂ ಕೂಡಾ, ಈ ಮೇಲೆ ತಿಳಿಸಿದಂತೆ ೧೮೦ ಎಂ.ಎಲ್ ನ ೧೦ ಬ್ಯಾಗ್ ಪೇಪರ್ ವಿಸ್ಕಿ ತುಂಬಿದ ಪೌಚ್ಗಳು, ೯೦ ಎಂ.ಎಲ್ ನ ೪೧ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ ಬಾಟಲುಗಳ ಸ್ವಾಧೀನ ಹೊಂದುವ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ –೧೯೬೫ರ ಕಲಂ ೩೨ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

**ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೆಶಿಸುತ್ತೇನೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕನಕಪುರ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**
**ಕನಕಪುರ**

**ಸಿ ಸಿ ನಂಃ 1201/2020**

## <u>ದೋಷಾರೋಪಣೆ</u>

ಲಿಂಗರಾಜು ಬಿನ್ ಚನ್ನಯ್ಯ
ವಯಸ್ಸು **೪೬** ವರ್ಷಗಳು
ವಾಸಃ ಯಡುವನಹಳ್ಳಿ ಗ್ರಾಮ
ಮರಳವಾಡಿ ಹೋಬಳಿ
ಕನಕಪುರ ತಾಲ್ಲೂಕು

**ನಿಮಗೆ ಓದಿ ಹೇಳಿದ ದೋಷಾರೋಪ ಅರ್ಥವಾಯಿತಾ?**

**ಉಃ**

**ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?**

**ಉಃ**

**ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಡಿಕರಿಸುತ್ತೇನೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕನಕಪುರ.**